**ಸಾಕ್ಷಿಯನ್ನು ದಿಃ 02.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತ ಹೇಗೆ ಆಯಿತು ಎಂದು ನನಗೆ ನೆನಪಿದೆ. ಕೆಎ-09-ಇಪಿ-9606 ಬೈಕ್ ನನಗೆ ಸೇರಿದ್ದು. ನನಗೆ ಚಾಲನ ಪರವಾನಗಿ ಇತ್ತು. ಈಗ ಬೈಕ್ ಚಾಲನೆ ಮಾಡುತ್ತಿಲ್ಲ. ನಾನು ಹೋಗುತ್ತಿದ್ದ ರಸ್ತೆ ಅಗಲವಾದ ರಸ್ತೆ ಎಂದರೆ ಸರಿ. ಅದು ನೇರ ರಸ್ತೆ ಎಂದರೆ ಸರಿ. ಎದುರುದಾರರು ಅವರ ಬದಿಯ ರಸ್ತೆಯ ಎಡಭಾಗದಲ್ಲೇ ಬರುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತ ರಸ್ತೆ ಮಧ್ಯಭಾಗದಲ್ಲಿ ನನ್ನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಅಪಘಾತ ಸ್ಥಳ ಜಂಕ್ಷನ್ ಅಲ್ಲ. ರಸ್ತೆಯ ಮಧ್ಯದಲ್ಲಿ ಡಿವೈಡರ್ ಇರಲಿಲ್ಲ. ನನ್ನ ಎಡಭಾಗಕ್ಕೆ ಜಾಗ ಇದ್ದು ನನ್ನ ನಿರ್ಲಕ್ಷ್ಯತನದಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಆ ದಿನ ನಾನು ಹೆಲ್ಮೆಟ್ ಧರಿಸಿದ್ದೆ. ಹೆಲ್ಮೆಟ್ ಧರಿಸಿದೇ ಇದ್ದ ಕಾರಣ ನನ್ನ ತಲೆಗೆ ಪೆಟ್ಟಾಗಿದೆ ಎಂದರೆ ಸರಿಯಲ್ಲ. ನನಗೆ ಜ್ಞಾನ ತಪ್ಪಿತ್ತು. ಮೊದಲು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಆನಂತರ ಡಿ.ಆರ್.ಎಂ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಯಾರು ಯಾವಗ ಕರೆದುಕೊಂಡು ಹೋಗಿರುತ್ತಾರೆ ಎಂದು ಗೊತ್ತಿಲ್ಲ. ದೂರನ್ನು ನನ್ನ ಹೆಂಡತಿ ಕೊಟ್ಟಿದ್ದಾರೆ ಯಾವಾಗ ಕೊಟ್ಟಿದ್ದಾರೆ ಎಂದು ನೆನಪಿಲ್ಲ. ಅವರು ಅಪಘಾತವನ್ನು ಕಣ್ಣಾರೆ ಕಂಡಿರುವುದಿಲ್ಲ. ನನಗೆ ಡಿಕ್ಕಿ ಪಡಿಸಿದ ವಾಹನದವರಿಗೆ ಪೆಟ್ಟಾಗಿತ್ತೋ ಇಲ್ಲವೋ ಗೊತ್ತಿಲ್ಲ. ನನಗೆ ತಲೆಗೆ ತೀವ್ರ ತರಹದ ಪೆಟ್ಟಾಗಿತ್ತು. ಅಪಘಾತಕ್ಕೆ ಮೊದಲು ನಾನು ಕಂಟ್ರಾಕ್ಟರ್ ಆಗಿದ್ದೆ ಲೈಸೆನ್ಸ್ ಇತ್ತು. ಈಗಲೂ ಲೈಸೆನ್ಸ್ ಇದೆ. ಈಗ ಕಂಟಾಕ್ಟ್ ತೆಗೆದುಕೊಳ್ಳುತ್ತಿಲ್ಲ. ನಾನು ಈಗಲೂ ಕಂಟಾಕ್ಟ್ ತೆಗೆದುಕೊಂಡು ದುಡಿಮೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ರೂ. 50,000/- ದುಡಿಮೆಯ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ.

2. ನಾನು ಮೂರು ತಿಂಗಳು ಆಸ್ಪತ್ರೆಯಲ್ಲಿ ದಾಖಲಾಗಿದ್ದೆ. ಶಸ್ತ್ರ ಚಿಕಿತ್ಸೆ ಮಾಡಿದ್ದಾರೆ. ಗೌತಮ್ ಎಂಬ ವೈಧ್ಯರು ಚಿಕಿತ್ಸೆ ನೀಡಿದ್ದಾರೆ ಎಂದು ಹೇಳಿದ್ದರು. ನಾನು ಗುಣಮುಖನಾದ ಕಾರಣ ಡಿಸ್ ಚಾರ್ಜ್ ಮಾಡಿದ್ದಾರೆ ಎಂದರೆ ಸರಿಯಲ್ಲ. ಒಂದೂವರೆ ವರ್ಷ ಕಳೆದ ಕಾರಣ ನಾನು

ಗುಣಮುಖನಾಗಿದ್ದೇನೆ ಎಂದರೆ ಸರಿಯಲ್ಲ. ಔಷಧಿ ಬಿಲ್ಲುಗಳನ್ನು ಸೃಷ್ಟಿಸಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಪೋಲೀಸರೊಂದಿಗೆ ಶಾಮಿಲಾಗಿ ಸುಳ್ಳು ಪ್ರಕರಣ ದಾಖಲಾಗುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಆದ ಕಾರಣ 2 ನೇ ಎದುರುದಾರರು ಪರಿಹಾರ ನೀಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.